## ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

### ಫೆಬ್ರವರಿ ೦೬, ೨೦೨೧ರ ಶನಿವಾರದಂದು ನಡೆದ ಕಾರ್ಯಕಾರಿ ಸಮಿತಿ ೨೦೬ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೪. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೫. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೬. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೭. ಶ್ರೀ ಜೈಭೀಮ್, ಕಲಬುರಗಿ | : ಸದಸ್ಯರು |
| ೦೮. ಡಾ. ವೈ.ಎಂ. ಭಜಂತ್ರಿ | : ಸದಸ್ಯರು |
| ೦೯. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೧೦. ಡಾ. ವೀರೇಶ್ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಸಿ.ಆರ್. ಗೋವಿಂದರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೩. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೪. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೬. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ಇತ್ತೀಚೆಗೆ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳಿಗೆ ಭಾಜನರಾದ ಎಲ್ಲಾ ಗಣ್ಯರಿಗೆ ವಿಶ್ವವಿದ್ಯಾಲಯದ ಪರವಾಗಿ ಮಾನ್ಯ ಕುಲಪತಿಗಳು ಅಭಿನಂದನೆಗಳನ್ನು ಸಲ್ಲಿಸಿ, ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗಳ ಮಾಹಿತಿಯನ್ನು ಸಭೆಗೆ ನೀಡಿದರು.

**ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.**

**ವಿಷಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೫ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. **(ಅನುಬಂಧ-೦೧)**

**ನಿರ್ಣಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿ ೨೦೫ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೫ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಸಭೆಯು ಅನುಮೋದನೆ ನೀಡುವ ಕುರಿತು. **(ಅನುಬಂಧ-೦೨)**

**ನಿರ್ಣಯ** : ದಿನಾಂಕ ೦೯.೧೦.೨೦೨೦ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೫ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೦೬.೦೧** ದಿನಾಂಕ ೩೦.೦೯.೨೦೨೦ರಂದು ಹಾಗೂ ೨೯.೧೨.೨೦೨೦ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸಭೆ (೨) ಮತ್ತು (೩)ರ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಸಭೆ ಅನುಮೋದನೆ ಕೋರಿದೆ.

**ನಿರ್ಣಯ** : ದಿನಾಂಕ ೩೦.೦೯.೨೦೨೦ರಂದು ಹಾಗೂ ೨೯.೧೨.೨೦೨೦ರಂದು ನಡೆದ ಕನ್ನಡ ವಿಶ್ವವಿದ್ಯಾಲಯದ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸಭೆ (೨) ಮತ್ತು (೩)ರ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ಅನುಮೋದನೆ ನೀಡಿತು.

ಅ) ನಿಗದಿತ ಅವಧಿಯೊಳಗೆ ಸೂಕ್ತ ದಾಖಲೆಗಳೊಂದಿಗೆ ಅಗತ್ಯವಿರುವ ಮಾಹಿತಿಯನ್ನು ನ್ಯಾಕ್‌ಗೆ ಅಪ್‌ಲೋಡ್ ಮಾಡಿ ಶೀಘ್ರವೇ ಪೂರ್ಣಗೊಳಿಸಲು ಹಾಗೂ ನ್ಯಾಕ್ ನಿಂದ 'ಎ' ಶ್ರೇಣಿ ದೊರಕುವುದಕ್ಕೆ ಅಗತ್ಯ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಭೆ ನಿರ್ಣಯಿಸಿತು.

೨೦೬.೦೨ ೨೦೧೮-೧೯ನೇ ಸಾಲಿನ ವಾರ್ಷಿಕ ವರದಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ನಿರ್ಣಯ : ಮಂಡಿಸಲಾಗಿದ ೨೦೧೮-೧೯ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೦೩ ಅಕ್ಟೋಬರ್ ೨೯, ೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೦೪ ನವಂಬರ್ ೧೭, ೨೦೨೦ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೦೫ ಡಿಸೆಂಬರ್ ೧೫, ೨೦೨೦ ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೦೬ ಶ್ರೀಮತಿ ರೇಣುಕಮ್ಮ ಗಂಡ ದಿವಂಗತ ಶ್ರೀ ಹನುಮಂತರಾಯ ಇವರ ಅವಲಂಬಿತ 'ಕುಟುಂಬ' ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೧೦.೧೦.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು. ೨೦೪.೧೯ನೇ ಸಭೆಯ ನಿರ್ಣಯದಂತೆ ೨೦೬ನೇ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ದಿ. ಶ್ರೀ ಹನುಮಂತರಾಯ, ಅನುಚರ ಇವರ ಮರಣದ ಹಿನ್ನೆಲೆಯಲ್ಲಿ ಅವರ ಕುಟುಂಬದ ಸದಸ್ಯರೊಬ್ಬರಾದ ಮಗ ಶ್ರೀ ಎಂ. ಗಂಗಾಧರ ಇವರು ಅನುಕಂಪದ ಆಧಾರದ ಮೇಲೆ ನೇಮಕ ಮಾಡುವಂತೆ ಸಲ್ಲಿಸಿದ ಮನವಿಯನ್ನು ಕಾರ್ಯಕಾರಿ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ: ಆಇ ೦೫ ಬಿಇಎಂ ೨೦೨೦, ದಿನಾಂಕ ೧೨.೧.೨೦೨೧ರ ರೀತ್ಯಾ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲು ಅನುಮೋದನೆ ನೀಡಿತು.

೨೦೬.೦೭ ಶ್ರೀಮತಿ ಬಿ. ಲಲಿತ, ಗಂಡ ದಿವಂಗತ ಶ್ರೀ ಬಿ. ರಾಮಕೃಷ್ಣ ಇವರ ಅವಲಂಬಿತ 'ಕುಟುಂಬ' ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ३೦.೧೨.೨೦೧೯ರಂದು ಸಲ್ಲಿಸಿರುವ ಮನವಿ ಕುರಿತು. ೨೦೪.೨೦ನೇ ಸಭೆಯ ನಿರ್ಣಯದಂತೆ ೨೦೬ನೇ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ: i. ದಿ. ರಾಮಕೃಷ್ಣ ಇವರ ಮರಣದ ಹಿನ್ನೆಲೆಯಲ್ಲಿ ಅವರ ಕುಟುಂಬದ ಸದಸ್ಯರೊಬ್ಬರಾದ ಮಗ ಬಿ.ಆರ್. ವಿವೇಕ ಇವರು ಅನುಕಂಪದ ಆಧಾರದ ಮೇಲೆ ನೇಮಕ ಮಾಡುವಂತೆ ಸಲ್ಲಿಸಿದ ಮನವಿಯನ್ನು ಕಾರ್ಯಕಾರಿ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿತು.

ii. ಕಮಲಾಪುರ ಪೊಲೀಸ್ ಠಾಣೆ ಪಿ.ಎಸ್.ಐ(ಕಾ&ಸು) ಅವರ ದಿನಾಂಕ ೨.೨.೨೦೨೧ರ ವರದಿಯಲ್ಲಿ, ಕಮಲಾಪುರ ಪಟ್ಟಣದಲ್ಲಿ ಈ ಹಿಂದೆ ೨೦೧೯ ಜನವರಿ ತಿಂಗಳಿನಲ್ಲಿ ಕಮಲಾಪುರ ಹಳ್ಳಿಕೇರಿಯಲ್ಲಿರುವ ಅಜ್ಜಿ ಅಂಗಡಿಯಲ್ಲಿ ಯಾರೋ ವ್ಯಕ್ತಿಗಳು ಕಳ್ಳತನ ಮಾಡಲು ಪ್ರಯತ್ನಿಸಿದ್ದು ಈ ಬಗ್ಗೆ ಕಮಲಾಪುರದ ಕಮ್ಮಾರ ದಿಮ್ಮಿಯ ವಾಸಿಗಳಾದ ವಿವೇಕಾಚಾರಿ ಹಾಗೂ ಇತರೆ ಮೂವರು ಬಾಲಕರ ಬಗ್ಗೆ ಅನುಮಾನ ವ್ಯಕ್ತವಾಗಿದ್ದು ಸದರಿಯವರನ್ನು ಠಾಣೆಗೆ ಕರೆಯಿಸಿ ವಿಚಾರಿಸಲಾಗಿ ಸದರಿಯವರು ಈ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ತಿಳಿದುಬಂದಿರುತ್ತದೆ. ಸದರಿ ಕಳ್ಳತನದಲ್ಲಿ ಭಾಗಿಯಾದ ವಿವೇಕಾಚಾರಿ ಹಾಗೂ ಇತರೆ ಮೂವರು ಬಾಲಕರು ವಯಸ್ಕರು ಆಗಿಲ್ಲದ ಕಾರಣ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ ಎಂದು ನೀಡಿರುವ ವರದಿಯನ್ನು ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

iii. ದಿವಂಗತ ನೌಕರ ರಾಮಕೃಷ್ಣ ಅವರ ಪುತ್ರನ ಮನವಿಯನ್ನು ಹಾಗೂ ಪೊಲೀಸ್ ಠಾಣೆಯ ವರದಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಇವರ ನೇಮಕಾತಿ ಸಾಧ್ಯತೆಗಳ ಕುರಿತು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನವನ್ನು ಕೋರಲು ನಿರ್ಣಯಿಸಿತು.

೨೦೬.೦೮ ಶ್ರೀಮತಿ ಎಸ್. ಪದ್ಮಾವತಿ ಗಂಡ ದಿವಂಗತ ಶ್ರೀ ಸೋಮಶೇಖರ ಇವರು ತಮಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ದಿನಾಂಕ ೦೨.೦೧.೨೦೨೦ರಂದು ಸಲ್ಲಿಸಿರುವ ಮನವಿ ಕುರಿತು. ೨೦೪.೨೧ನೇ ಸಭೆಯ ನಿರ್ಣಯದಂತೆ ೨೦೬ನೇ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ದಿ. ಸೋಮಶೇಖರ, ಇವರ ಮರಣದ ಹಿನ್ನೆಲೆಯಲ್ಲಿ ಅವರ ಕುಟುಂಬದ ಸದಸ್ಯರೊಬ್ಬರಾದ ಸದರಿಯವರ ಪತ್ನಿ ಶ್ರೀಮತಿ ಎಸ್.ಪದ್ಮಾವತಿ ಇವರು ಅನುಕಂಪದ ಆಧಾರದ ಮೇಲೆ ನೇಮಕ ಮಾಡುವಂತೆ ಸಲ್ಲಿಸಿದ ಮನವಿಯನ್ನು ಕಾರ್ಯಕಾರಿ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ ಸುತ್ತೋಲೆ ಸಂಖ್ಯೆ: ಆಇ ೦೫ ಬಿಇಎಂ ೨೦೨೦, ದಿನಾಂಕ ೧೨.೧.೨೦೨೧ರ ರೀತ್ಯಾ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಲು ಅನುಮೋದನೆ ನೀಡಿತು.

೨೦೬.೦೯ ಡಾ. ಎಸ್. ಮೋಹನ್, ಪ್ರಕಟಣ ಸಹಾಯಕರು ಇವರು ಪ್ರಕಟಣ ಸಹಾಯಕ ಹುದ್ದೆಯಿಂದ ಅಧ್ಯಾಪಕ ಹುದ್ದೆಗೆ ಮೇಲ್ದರ್ಜೆಗೇರಿಸುವಂತೆ ಕೋರಿ ದಿನಾಂಕ ೨೮.೦[illegible].೨೦೨೦ರಂದು ಸಲ್ಲಿಸಿರುವ ಮನವಿ ಕುರಿತು. ೨೦೪.೨೨ನೇ ಸಭೆಯ ನಿರ್ಣಯದಂತೆ ವಿಸ್ತೃತ ಮಾಹಿತಿಗಳೊಂದಿಗೆ ೨೦೬ನೇ ಕಾರ್ಯಕಾರಿ ಸಮಿತಿಗೆ ಮಂಡಿಸಿದೆ.

ನಿರ್ಣಯ : ಡಾ. ಎಸ್. ಮೋಹನ್, ಪ್ರಕಟಣ ಸಹಾಯಕರು ಇವರು ಪ್ರಕಟಣ ಸಹಾಯಕ ಹುದ್ದೆಯಿಂದ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಮೇಲ್ದರ್ಜೆಗೇರಿಸುವಂತೆ ಕೋರಿದ ದಿನಾಂಕ ೨೮.೦೯.೨೦೨೦ರ ಮನವಿಯನ್ನು ಸಭೆಯು ಪರಿಶೀಲಿಸಿ ಈ ಸಂಬಂಧ ಅನುಶಾಸನವನ್ನು ರಚಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೦೬.೧೦ ಶ್ರೀ ಪ್ರಶಾಂತ್ ಭೀಮಯ್ಯ, ಕಾರ್ಯಕಾರಿ ಸಮಿತಿ ಸದಸ್ಯರು ಇವರು ದಿನಾಂಕ ೨೯.೦೧.೨೦೨೧ರಂದು ಸಲ್ಲಿಸಿರುವ ಮನವಿಯಂತೆ ದೂರಶಿಕ್ಷಣ ಕಾರ್ಯಕ್ರಮದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಎಂ.ಎ. ಶಿಕ್ಷಣ (Education)ಕೋರ್ಸ್ ಪ್ರಾರಂಭಿಸುವ ಸಾಧ್ಯಾಸಾಧ್ಯತೆಗಳ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯ ಪರಿಶೀಲಿಸಿ, ನ್ಯಾಕ್ ಸಂಸ್ಥೆಯಿಂದ 'ಬಿ' ಗ್ರೇಡ್ ದೊರೆತಿರುವುದರಿಂದ ನೂತನ ಕೋರ್ಸ್‌ಗಳನ್ನು ಆರಂಭಿಸುವಂತಿಲ್ಲ ಎಂಬ ದೂರಶಿಕ್ಷಣ ಮಂಡಳಿ ನಿಯಮ ಜಾರಿಯಲ್ಲಿರುವುದನ್ನು ಗಮನಿಸಿ, ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

i. ಮುಂದಿನ ದಿನಗಳಲ್ಲಿ ಎಂ.ಎ. ಶಿಕ್ಷಣ (Education)ಕೋರ್ಸ್ ಪ್ರಾರಂಭಿಸುವ ಸಂಬಂಧ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸದರಿ ಕೋರ್ಸ್ ಆರಂಭಿಸುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವುದು.

ii. ಹಾಗೂ ರೆಗ್ಯೂಲರ್ ಎಂ.ಎ. ಶಿಕ್ಷಣ (Education)ಕೋರ್ಸ್ ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಸಹ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವುದು.

iii. ಈ ಸಂಬಂಧ ವಿಭಾಗ ಮತ್ತು ಕೋರ್ಸನ್ನು ಆರಂಭಿಸುವ ಬಗ್ಗೆ ಶಿಕ್ಷಣ ತಜ್ಞರನ್ನೊಳಗೊಂಡ ಸಮಿತಿಯನ್ನು ರಚಿಸಿ ಅನುಶಾಸನಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸುವುದು.

೨೦೬.೧೧ ಜನವರಿ ೨೯, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೧೨ ಕನ್ನಡ ವಿಶ್ವವಿದ್ಯಾಲಯದ ೨೯ನೇ ನುಡಿಹಬ್ಬದ ಪ್ರಕ್ರಿಯೆಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ, ೨೯ನೇ ನುಡಿಹಬ್ಬದ ಪ್ರಕ್ರಿಯೆಗಳಿಗೆ ಈ ಕೆಳಗಿನಂತೆ ತೀರ್ಮಾನ ಕೈಗೊಳ್ಳಲು ಅನುಮೋದನೆ ನೀಡಿತು.

i. ೨೯ನೇ ನುಡಿಹಬ್ಬದ ದಿನಾಂಕವನ್ನು ನಿಗದಿ ಪಡಿಸುವಂತೆ ಕೋರಿ ಘನತೆವೆತ್ತ ಮಾನ್ಯ ಕುಲಾಧಿಪತಿಗಳಿಗೆ ಪತ್ರ ಬರೆಯಲು ಸಭೆಯು ಅನುಮೋದನೆ ನೀಡಿತು.

ii. ನುಡಿಹಬ್ಬದ ಭಾಷಣಕ್ಕಾಗಿ ಡಾ. ಚಂದ್ರಶೇಖರ ಕಂಬಾರ, ಡಾ. ಎಸ್.[illegible]. ಭೈರಪ್ಪ, ಡಾ. ಬಿ.ಎಂ. ಹೆಗಡೆ, ಡಾ. ಬಿ.ಎ. ವಿವೇಕ ರೈ, ಡಾ. ಎಂ.ಕೆ. ರಮೇಶ, ಡಾ. ಎಂ.ಕೆ. ಶ್ರೀಧರ, ಡಾ. ತೇಜಸ್ವಿ ಕಟ್ಟಿಮನಿ, ಶ್ರೀ ಇಬ್ರಾಹಿಂ ಸುತಾರ, ಪ್ರೊ.ಬಿ.ತಿಮ್ಮೇಗೌಡ, ಡಾ. ಸುಧಾರಾವ್, ಡಾ.ಪದ್ಮಾ ಶೇಖರ್, ಡಾ.ಎಸ್.ಎ.ಕೋರಿ ಮತ್ತು ಡಾ.ಜಮುನಾ ಇವರುಗಳ ಹೆಸರುಗಳನ್ನು ಸೂಚಿಸಿದ ಸಮಿತಿಯು ಮಾನ್ಯ ಕುಲಪತಿಗಳು ತಮ್ಮ ವಿವೇಚನಾನುಸಾರ ಗಣ್ಯರ ಹೆಸರನ್ನು ಘನತೆವೆತ್ತ ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಿತು.

iii. ನಾಡೋಜ ಆಯ್ಕೆ ಸಮಿತಿಗೆ ಕಾರ್ಯಕಾರಿ ಸಮಿತಿ ವತಿಯಿಂದ ಡಾ. ಕೆ.ಎಂ.ಕಾವೇರಿಯಪ್ಪ, ಡಾ.ಎ.ಮುರಿಗೆಪ್ಪ, ಡಾ.ಮಂಜಪ್ಪ ಹೊಸಮನೆ, ಡಾ. ವಿಷ್ಣುಕಾಂತ ಚಟಪಲ್ಲಿ, ಡಾ.ಕರಿಸಿದ್ದಪ್ಪ, ಪ್ರೊ.ಜಿ.ಹೇಮಂತಕುಮಾರ, ಡಾ.ಪಿ.ಸುಬ್ರಹ್ಮಣ್ಯ ಎಡಪಡಿತ್ತಾಯ, ಡಾ.ಎಸ್.ಎ.ಹಲಸೆ, ಡಾ.ಹರೀಶ್ ರಾಮಸ್ವಾಮಿ, ಡಾ.ನಾಗೇಶ ಬೆಟಕೋಟೆ, ಡಾ.ತುಳಸಿಮಾಲಾ ಮತ್ತು ಡಾ.ವಸಂತಕುಮಾರ ತಾಳ್ತಜೆ ಇವರುಗಳ ಹೆಸರುಗಳನ್ನು ಸೂಚಿಸಿದ ಸಮಿತಿಯು ಮಾನ್ಯ ಕುಲಪತಿಗಳ ವಿವೇಚನಾನುಸಾರ ಗಣ್ಯರ ಹೆಸರನ್ನು ಘನತೆವೆತ್ತ ಮಾನ್ಯ ಕುಲಾಧಿಪತಿಗಳಿಗೆ ಸಮಿತಿ ರಚನೆಗಾಗಿ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಿತು.

iv. ನಾಡೋಜ ಆಯ್ಕೆ ಸಮಿತಿಯು ರಚನೆಯಾದ ನಂತರ ನಾಡೋಜ ಗೌರವಕ್ಕಾಗಿ ಸ್ವೀಕೃತವಾಗಿರುವ ಮನವಿಗಳನ್ನಾಧರಿಸಿ ಸಿದ್ಧಪಡಿಸಲಾದ ಸಾಧಕರ ಪಟ್ಟಿಯನ್ನು ಆಯ್ಕೆ ಸಮಿತಿಗೆ ಸಲ್ಲಿಸುವುದೆಂದು ಸಭೆಯು ತೀರ್ಮಾನಿಸಿತು.

೨೦೬.೧೩ ದಿನಾಂಕ ೧೨.೦೧.೨೦೨೧ರಂದು ನಡೆದ ಎಂ.ಎ. ಪಿಎಚ್.ಡಿ. ಕನ್ನಡ ಸಾಹಿತ್ಯ ಸಂಯೋಜಿತ ಪದವಿಯ ಅಧ್ಯಯನ ಮಂಡಳಿ (ಬಿ.ಓ.ಎಸ್.) ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೧೪ ಚನ್ನಪಟ್ಟಣ ತಾಲೂಕಿನ ಕಣ್ಣಮಂಗಲ ಗ್ರಾಮದ ವ್ಯಾಪ್ತಿಯಲ್ಲಿ ಬರುವ "ಸಾಧನ ಸಂಗಮ ಟ್ರಸ್ಟ್‌ನ ಅಂಗ ಸಂಸ್ಥೆಯಾದ" ರಸಋಷಿ ಸಂಶೋಧನಾ ಕೇಂದ್ರಕ್ಕೆ ಕನ್ನ ವಿಶ್ವವಿದ್ಯಾಲಯದ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ ೦೪.೦೧.೨೦೨೧ರಂದು ಭೇಟಿ ನೀಡಿ ವರದಿ ನೀಡಿರುವ ಹಿನ್ನೆಲೆಯಲ್ಲಿ ಸಂಗೀತ ಮತ್ತು ನೃತ್ಯಕ್ಕೆ ಸಂಬಂಧಿಸಿದ ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ನಡೆಸಲು ಸದರಿ ಸಂಸ್ಥೆಗೆ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ನೀಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವರದಿಯನ್ನು ಸಭೆಯು ಪರಿಶೀಲಿಸಿ ಮಾನ್ಯತೆ ನೀಡಲು ಅನುಮೋದನೆ ನೀಡಿತು.

೨೦೬.೧೫ ಕನ್ನಡ ವಿಶ್ವವಿದ್ಯಾಲಯದ ೨೦೨೦–೨೧ನೇ ಸಾಲಿನ ಮೊದಲನೇ ತ್ರೈಮಾಸಿಕ ಹಣಕಾಸು ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೦೬.೧೬ ಕನ್ನಡ ವಿಶ್ವವಿದ್ಯಾಲಯದ ಲಲಿತಕಲೆಗಳ ನಿಕಾಯದ ಸಂಗೀತ ಮತ್ತು ನೃತ್ಯ ಹಾಗೂ ದೃಶ್ಯಕಲಾ ವಿಭಾಗಗಳಲ್ಲಿ ಸಂಗೀತ/ ದೃಶ್ಯಕಲೆ/ ಜನಪದ/ ಪಾರಂಪರಿಕ ಕಲೆ ಸಂಬಂಧಿಸಿದಂತೆ ಪಿಎಚ್.ಡಿ. ಅಧ್ಯಯನ ಕೈಗೊಳ್ಳಲು ಅನುಕೂಲತೆಯನ್ನು ಕಲ್ಪಿಸುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ಲಲಿತಕಲೆಗಳ ನಿಕಾಯದ ಸಂಗೀತ ಮತ್ತು ನೃತ್ಯ ಹಾಗೂ ದೃಶ್ಯಕಲಾ ವಿಭಾಗಗಳಲ್ಲಿ ಸಂಗೀತ/ ದೃಶ್ಯಕಲೆ/ ಜನಪದ/ ಪಾರಂಪರಿಕ ಕಲೆ ಸಂಬಂಧಿಸಿದ ವಿಷಯಗಳ ಕುರಿತು ಪಿಎಚ್.ಡಿ. ಅಧ್ಯಯನವನ್ನು ಕೈಗೊಳ್ಳಲು ಅನುವಾಗುವಂತೆ ದಾಖಲೆಗಳನ್ನು ಪರಿಶೀಲಿಸಿ, ಅನುಶಾಸನವನ್ನು ಸಿದ್ಧಪಡಿಸಿ ಸರ್ಕಾರದ ವಿಶೇಷ ಅನುಮತಿಯನ್ನು ಪಡೆದು ಕಾರ್ಯರೂಪಕ್ಕೆ ತರಲು ಸೂಕ್ತ ಕ್ರಮವಹಿಸುವಂತೆ ಸಭೆ ತೀರ್ಮಾನಿಸಿತು.

೨೦೬.೧೭ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳ ಕಾರ್ಯಚಟುವಟಿಕೆಗಳ ಕುರಿತು.

ನಿರ್ಣಯ : ವಿಶ್ವವಿದ್ಯಾಲಯ ವಿಸ್ತರಣಾ ಕೇಂದ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಕೇಂದ್ರಗಳ ಕಾರ್ಯಚಟುವಟಿಕೆಗಳನ್ನು ಉತ್ತಮಪಡಿಸಲು ಸೂಕ್ತ ಕ್ರಮವಹಿವಂತೆ ಸಭೆ ತೀರ್ಮಾನಿಸಿತು.

೨೦೬.೧೮ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನವಾಗಿ ಮಹಿಳಾ ವಸತಿ ನಿಲಯವನ್ನು ಮಂಜೂರು ಮಾಡಲು ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಶೀಘ್ರವಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನವಾಗಿ ಮಹಿಳಾ ವಸತಿ ನಿಲಯವನ್ನು ಮಂಜೂರು ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರದ ಮಂಜೂರಾತಿಗೆ ಸಲ್ಲಿಸುವುದು ಹಾಗೂ ಅಕ್ಷರದವ್ವ ಸಾವಿತ್ರಿಬಾಯಿ ಫುಲೆ (ಪಜಾ/ಪಪಂ) ಮಹಿಳಾ ವಸತಿನಿಲಯದ ನಿರ್ವಹಣೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸಲು ಸೂಕ್ತ ಕ್ರಮವಹಿಸುವುದೆಂದು ತೀರ್ಮಾನಿಸಿತು.

೨೦೬.೧೯ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳಿಗೆ ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ ಹಂಚಿಕೆಯಾಗಿರುವ ಜಮೀನುಗಳನ್ನು ವಿಶ್ವವಿದ್ಯಾಲಯಕ್ಕೆ ವಶಪಡಿಸಿಕೊಳ್ಳುವ ಬಗ್ಗೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಹಂಚಿಕೆಯಾಗಿರುವ ಜಮೀನುಗಳನ್ನು ವಿಶ್ವವಿದ್ಯಾಲಯದ ಹೆಸರಿಗೆ ಶೀಘ್ರವಾಗಿ ವರ್ಗಾವಣೆ ಮಾಡಿಕೊಳ್ಳಲು/ ವಶಪಡಿಸಿಕೊಳ್ಳಲು ಸೂಕ್ತ ಕ್ರಮಗೊಳ್ಳಬೇಕೆಂದು ತೀರ್ಮಾನಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು